

ಬಗೆಯ ಸಾಧ್ಯತೆಗಳನ್ನು ಕಂಡುಕೊಳ್ಳುವ ಪ್ರಯತ್ನವಿರುತ್ತದೆ. ಆ ಸಾಧ್ಯತೆಗಳಲ್ಲಾ ಆ ಸರೋವರದಲ್ಲಿ ಮಾತ್ರ ಸಾಧ್ಯ. ತಣ್ಣಗಿನ ಕುಳಿರಿಗೆ, ಮೆತ್ತನೆ ಹೊರಳುವ ಅಲ್ಲಿನ ಅಲೆಗಳು, ಹಾಗೊಮ್ಮೆ ಹೀಗೊಮ್ಮೆ ಅವುಗಳೆಬ್ಬಿಸುವ ಪುಳಕಗಳು ಜೀವ ತೇಜವನ್ನು ನೀಡುತ್ತವೆ ಅಷ್ಟೇ. ಆದರೆ ಹರಿವ ತೊರೆಯೆಂಬ ಪ್ರಣಯದಲ್ಲಿ ಕಾಣ ಸಿಗುವ ಸಾಧ್ಯತೆಗಳು, ಬದುಕನ್ನು ಕಾಮಿಸುವ ಬಗೆಯ ಅವಕಾಶಗಳು ಹೆಚ್ಚು. ಅದಕ್ಕೆ ಯಾವುದೇ ತರದ ಹಮ್ಮುಬಿಮ್ಮುಗಳಿಲ್ಲದೆ ಕ್ಷಣ ಕ್ಷಣಕ್ಕೂ ಹೊಸ ಗಾಳಿಗೆ ಮೈಯೊಡ್ಡುವ ತವಕ, ತಲ್ಲಣಗಳಲ್ಲೆಲ್ಲಾ ರೋಮಾಂಚನ. ಹರಿ ಹರಿದು, ಕುಣಿ ಕುಣಿದು ಬರುವಾಗ ಅಕ್ಕ ಪಕ್ಕದಲ್ಲಿರುವುದನ್ನೆಲ್ಲಾ ತನ್ನೊಳಗೆ ಸೇರಿಸಿಕೊಂಡು ಅದು ಮೋಕ್ಷ ಕರುಣಿಸುವ ಪರಿ ಇದೆಯಲ್ಲ ಅದ್ಭುತ! ಆ ಸ್ನಿಗ್ಧ, ಮುಗ್ಧ ಸೌಂದರ್ಯಕ್ಕೆ ಬೆತ್ತಲಾಗದವರು ಯಾರು ಹೇಳು..? ಅದರೊಳಗೆ ಮಿಳಿತಗೊಳ್ಳದ ಇತರೆಗಳಿಗೆ ಹಪಹಪಿಸುವ ಕೆಲಸ ಮಾತ್ರ. ಯಾವುದಕ್ಕೂ ಗುರುತಿಸುವ ಭಾಗ್ಯ ನಮ್ಮದಾಗಬೇಕು. ಆ ರಭಸಕ್ಕೆ, ಸೆಳೆತಕ್ಕೆ ಎದೆಯೊಡ್ಡಿ ಸ್ವೀಕರಿಸುವುದು ಅವರವರಿಗೆ ಬಿಟ್ಟಿದ್ದು. ಆ ತೊರೆಯು ಕೊಡುವುದನ್ನೆಲ್ಲವನ್ನು ನಿರ್ಭಯವಾಗಿ, ಯಾವುದೇ ಅಪೇಕ್ಷೆಗಳಿಲ್ಲದೆ ನೀಡುತ್ತದೆ. ಆಯ್ಕೆ ನಿನ್ನದು, ಅನುಭವವೂ ನಿನ್ನದೇ.. ಹಾಗಾಗಿ ಬದುಕಿನ ಈ ಎಲ್ಲಾ ಸ್ಪೈಸ್ ಗಳನ್ನು ಹೊಂದಿರುವ 'ಪ್ರಣಯವೇ' ನನ್ನ ಆಯ್ಕೆ ಕಣೋ ಎಂದು ಅಳಿದುಳಿದ ಶಿವಾಸ್ ನ ಗುಟುಕೇರಿಸಿದ.

ಕೈ ಸಿಗರೇಟಿಗಾಗಿ ಜೇಬಿನತ್ತ ಹೊರಟಾಗ ಲಹರಿಯನ್ನು ತುಂಡರಿಸಿದ ಫೋನಿಗೆ ಶಾಪ ಹಾಕುತ್ತಾ ಎತ್ತಿ ನೋಡಿದರೆ ಅದು ಶ್ರುತಿಯದ್ದಾಗಿತ್ತು ! ಆಕೆಯದ್ದು ಹಳೆಯ ಪರಿಚಯ, ಏನೋ ಅಪ್ಪಿ ತಪ್ಪಿ ಮಾಡಿರಬಹುದೆಂದು ಅದರ ಗೋಜಿಗೆ ಹೋಗದೆ ತನ್ನ ಲಹರಿಯನ್ನು ಹರಿಯ ಬಿಟ್ಟ. ಆದರೂ ಈ ಹೊತ್ತಲ್ಲಿ......? ಎನ್ನುವ ಹುಳು ಅವನ ತಲೆಯನ್ನು ಹೊಕ್ಕದೆ ಇರಲಿಲ್ಲ. ಇತ್ತ ತೇಜಸ್ವಿ ಪಂಚಮನ ಅದ್ಭುತ ಮೂಡ್ ಅನ್ನು ಎನ್‌ಕ್ಯಾಶ್ ಮಾಡಿಕೊಳ್ಳಲು ತನ್ನ ಫಾರ್ಮ್ ಹೌಸ್‌ಗೆ ಕರೆದೊಯ್ಯುವ ತವಕದಲ್ಲಿದ್ದ. ಅಲ್ಲಿ ಆತನ ಗಜಲ್‌ಗಳ ರೋಮಾಂಚನ ಪಲುಕುಗಳನ್ನು ಕೇಳುವ ಹಂಬಲದಲ್ಲಿದ್ದ. ಅದೆಷ್ಟು ವರ್ಷಗಳಾಗಿದ್ದವು ಪಂಚಮನ ಹಾಡು ಕೇಳದೆ...! ಮೈ ಮನಗಳನ್ನು ತೆರೆದಿಟ್ಟು ಏರು... ಇದು ತೇಜಸ್ವಿಯ ತೆರೆದೆದೆಯ ತೇರು.... ಎಂದು ಪಂಚಮನನ್ನು ತೆರೆದ ಜೀಪಿನೊಳಕ್ಕೆ ಎಳೆದು ಕೊಂಡು ಫಾರ್ಮ್ ಹೌಸ್‌ನತ್ತ ಜೀಪನ್ನು ಓಡಿಸಿದ.

ಆಗಸದಿ ತುಂಬಾ ಚೆಲ್ಲಿದ ನಕ್ಷತ್ರಗಳು, ಬೀಗುತ್ತಾ ಉದ್ದೀಪಿಸುತ್ತಿರುವ ರಜನೀಶ ಬೇರೆ. ಇನ್ನೇನು ಬೇಕು ಲಹರಿ ತುಂಬಲು! ಆ ಲಹರಿಗಾಗಿಯೇ ಹಸಿದಿದ್ದ ತೇಜಸ್ವಿ ಗಜಲ್ ಹಾಡುವಂತೆ ಪಂಚಮನನ್ನು ದುಂಬಾಲು ಬಿದ್ದ. ಪಂಚಮ ಹೃದಯ–ಮನಸ್ಸು ಬಿಚ್ಚಿ ಹಾಡದೆ ಅದೆಷ್ಟೋ ವಸಂತಗಳೇ ಕಳೆದಿದ್ದವು. ಉತ್ಕಟವಾಗಿ ಬದುಕನ್ನು ಕಾಮಿಸುವ ಪಂಚಮ ಎಂಬ ಲಹರಿಗೆ ತೇಜಸ್ವಿಯ ಮಾತು ರಜನೀಶನಷ್ಟೇ ಉದ್ದೀಪಿಸಿದ್ದು ನಿಜ. ರಾಗ್ ಯಮನ್‌ನಲ್ಲಿ ಗಜಲ್ 'ಶೆಹೆನ್ ಷಾ' ಮೆಹದಿ ಹಸನ್ ಖಾನ್ ಸಾಬ್ ಹಾಡಿದ 'ರಂಜೀಶೆ ಸಹಿ..ದಿಲ್ ಹಿ ದುಖಾ ನೆ ಲಿಯೆ ಆssss...' ಗಜಲ್ ಅನ್ನು ಹಾಡಿ ಮುಗಿಸಿದಾಗ ತೇಜಸ್ವಿ ಜೀಪನ್ನು ಕಾಡಿನ ಮಧ್ಯೆ ಹರಿದು ಹೋಗುತ್ತಿದ್ದ ತೊರೆಯ ಬಳಿ ನಿಲ್ಲಿಸಿದ್ದ. ತಲೆಯ ಮೇಲೆ ಬೆಳದಿಂಗಳ ಚಾದರ. ಲಹರಿಗೆ ಬಂದ ಪಂಚಮನಿಂದ ಒಂದರ ಹಿಂದೆ ಒಂದರಂತೆ ಗಜಲ್‌ಗಳ ಚಿತ್ತಾರ. ನಶೆ ಇಳಿಸಿದ ನಿಷೆಗೆ ಮತ್ತೊಮ್ಮೆ ಬೊಗಸೆಯಲ್ಲಿ ನಶೆಯನ್ನು ಎತ್ತಿಕೊಂಡು ತೇಜಸ್ವಿ ಹಾಜರ್. ಅಲ್ವೋ... ಪಂಚಮ ನೀರಿಗೆ ಏನು ಮಾಡೋಣ ಎಂಬ ಪದದ ಸಾಲು ಅವನ ಬಾಯಿಯಿಂದ ಹೊರಳಿ ಉರುಳುವ ಮೊದಲೇ ಪಂಚಮ ಹರಿವ ಸಲೀಲೆಯನ್ನು ಬಂಗಾರ ಬಣ್ಣದ ನೀರಿಗೆ ಬೆರೆಸಿದ್ದ. ಅಷ್ಟರಲ್ಲಿ ಮತ್ತೊಮ್ಮೆ ಆತನ ಫೋನ್ ರಿಂಗಣಿಸಿತು. ನೋಡಿದರೆ ಮತ್ತೆ ಆ ಕರೆ ಶ್ರುತಿಯದ್ದಾಗಿತ್ತು. ಇದೇನಿದು ಅವೇಳೆಯಲ್ಲಿ...? ಏನಾದರೂ ಅಹಿತಕರ... ಛೇ...ಇರಲಾರದು ಎಂದು ಮನದಲ್ಲೇ ನೆನೆದು ಥಟ್ಟನೆ ಕರೆಯನ್ನು ಸ್ವೀಕರಿಸಿದವನೇ ಎಂದಿನಂತೆ ಹೇ..... ಆಫ್ಟರ್ ಲಾಂಗ್ ಟೈಮ್ .......ವ್ಹಾಟ್ಸ್ ಅಪ್ ಶ್ರುತಿ..? ಎಂದು ತನ್ನ ಮಾಮೂಲು ಧಾಟಿಯಲ್ಲಿ ಮಾತು ಹಚ್ಚೆ, ಇದೇನಿದು ಈ ಅವೇಳೆಯಲ್ಲಿ ಅಪಶ್ರುತಿ ಎಂದು ಕಿಚಾಯಿಸಿದ. ಹ್ಮ್..... ಎಂದು ಉಸಿರಿದವಳೇ, 'ಲೈಫ್ ಈಸ್ ಬ್ಯೂಟಿಫುಲ್' ಎಂದು ಹೇಳುತ್ತಾ ತಿರುಗುವ ಸುಂದರ ಬದುಕಿನ ರಾಜ ತಾಂತ್ರಿಕನೇ ಇಗೋ ಕೇಳುವಂತವನಾಗು... ಎಂದು ತನ್ನ ಇರುಳ ರಾಗವನ್ನು ಹಚ್ಚಲು ಅಣಿಯಾದಳು. ಓತಪ್ರೋತವಾಗಿ ಸಂಚರಿಸುತ್ತಿದ್ದ ಸಪ್ತಸ್ವರಗಳನ್ನು ಅವುಗಳದ್ದೇ ಸ್ಥಾನದಲ್ಲಿ ಕಟ್ಟಿ ಹಾಕಿ ಆಕೆ ಮೀಟಿದ ಶ್ರುತಿ ಹೀಗಿತ್ತು.....;

....ಅರೆ ಪಂಚಮ... ನಿನ್ನ ನೋಡಿದಾಗಿನಿಂದ ನನ್ನಲ್ಲಿ ಹುಟ್ಟಿದ ಭಾವನೆ, ಪುಳಕಗಳು ನನಗೇ ಸೀಮಿತವದು. ನನ್ನೊಳಗೆ ಹುಟ್ಟು ಹಾಕಿದ ಆ ತಲ್ಲಣ, ತಳಮಳಗಳನ್ನು ಇಷ್ಟು ವರ್ಷ ಹೇಗೆ ಹಿಡಿದಿಟ್ಟಿದ್ದೇನೋ ನಾ ಅರಿಯೆ. ನಿನ್ನ ನುಡಿಗೆ ಅದರ ಮೋಡಿಗೆ, ಆ ಪುರುಷತ್ವದ ಅಹಂಗೆ ಸೆಳೆಯಲ್ಪಟ್ಟವಳು ನಾನು. ಅದೆಷ್ಟೋ ಬಾರಿ ನಿನ್ನ ಕಂಡಾಗ ನನ್ನೊಳಗಿನ ಸೆಳೆತವನ್ನು ನಿಯಂತ್ರಿಸುವಲ್ಲಿ ವಿಫಲಳಾಗಿ ನಿನ್ನಿಂದ ದೂರ ಹೋದದ್ದಿದೆ. ನನ್ನ ಕಂಡಾಗಲೆಲ್ಲಾ ನೀನು ನನ್ನ ಮಾತನಾಡಿಸುವ ರೀತಿಯು ಬೊಗಸೆಯಲ್ಲಿ ಪ್ರೀತಿಯನ್ನು ಹಿಡಿದು ತಂದಂತಿರುತ್ತಿತ್ತು. ನಿನ್ನ ನೋಟದ ಅಮಲಿಗೆ ಅಡಿಕ್ಟ್ ಆದವಳು ನಾನು. ಆ ತುಟಿಯಂಚಿನಲ್ಲಿ ಬೀರುತ್ತಿದ್ದ ತುಂಟ ನಗೆಯು ಯಾವ ಹೃದಯ ಸರಸಿಯನ್ನು ಬಳಿ ಸೆಳೆಯಲಾರದು ಹೇಳು.....? ನಿನ್ನ ಮನೆಯ ಓಣಿಯಲ್ಲಿ ಪದೇ ಪದೇ ಹಾದು ಹೋಗುವಾಗಲೂ ನನ್ನೊಳಗೆ ಉಂಟಾಗುವ ರೋಮಾಂಚನವಿದೆಯಲ್ಲಾ ಅದು ಅನುಭವಿಸಿದ ನನಗೆ ಮಾತ್ರ ಗೊತ್ತು. ಆವಾಗಲೆಲ್ಲಾ ಅದಮ್ಯ ಚೇತನವೊಂದು ನನ್ನನ್ನು ಪ್ರವೇಶಿಸಿದಂತಾಗುತ್ತಿತ್ತು. ನಿನ್ನ ನೆನೆದಾಗ ಉಂಟಾಗುವ ಉದ್ವೇಗವು ನನ್ನನ್ನು ಎದ್ದೆದ್ದು ಒಗೆಯುತ್ತಿತ್ತು. ನಿನ್ನೊಳಗೆ ಮಿಳಿತವಾಗಬೇಕೆನ್ನುವ ನನ್ನ ಭಾವಕ್ಕೆ, ರಾಗಕ್ಕೆ ದಿನಾ ಶ್ರುತಿ ಹಚ್ಚುತ್ತಿದ್ದೆ. ನಿನ್ನೊಳಗನ್ನು ಬಗೆದು, ನಿನ್ನೆದೆಯ ಗೂಡಲ್ಲಿ ಕೋಗಿಲೆಯಂತೆ ಪಂಚಮದಲ್ಲಿ ಹಾಡಬೇಕೆಂಬ ಕನಸು ನನ್ನದಾಗಿತ್ತು. ನಿನಗಿವೆಲ್ಲಾ ತಿಳಿಯದು ಕಣೋ.....ಈ ಎಲ್ಲಾ ಭಾವ ತೀವ್ರತೆಯನ್ನು ನನ್ನವನ ಬಳಿ ಹೇಳಿಕೊಂಡಾಗಿದೆ. ನನ್ನ ಭಾವನೆಗಳನ್ನು ಗೌರವದಿಂದ ಕಾಣುವ ಆ ಮನುಷ್ಯ ನನ್ನ ತೀವ್ರತೆಗಳನ್ನು ಹದ್ದು ಬಸ್ತಿನಲ್ಲಿಡಲು, ನಿಯಂತ್ರಿಸಿಕೊಳ್ಳಲು ತಿಳಿ ಹೇಳಿ ಎಚ್ಚರಿಸುತ್ತಿದ್ದ. ಆತನದ್ದು ವಿಶಾಲ ಹೃದಯ ಬಿಡು. ಯಾವ ಗಂಡ ತನ್ನ ಹೆಂಡತಿಯೊಳಗಿನ ಇಂತಹ ಅಲೆಗಳನ್ನು ಸಹಿಸಬಲ್ಲ ಹೇಳು....?

ವರ್ಷಗಳ ಕೆಳಗೆ ನಿನ್ನಲ್ಲಿ ಇದನ್ನೆಲ್ಲಾ ಹೇಳಿಕೊಂಡು ಬರಿದಾಗಬೇಕೆಂದಿದ್ದೆ. ಆದರೆ ನನ್ನವನ ಎಚ್ಚರಿಕೆ ನನ್ನನ್ನು ಕಟ್ಟಿ ಹಾಕಿತ್ತು. ನೀನು ಹೇಗೆ ಸ್ವೀಕರಿಸುತ್ತಿಯೆಂಬ ದುಗುಡ ನನ್ನಲ್ಲಿತ್ತು. ಹಾಗಾಗಿ ನಿನ್ನ ಬಳಿ ನಿವೇದಿಸಿಕೊಳ್ಳದಾದೆ. ಇದೀಗ ಕಟ್ಟೆ ಒಡೆದು ಹೊರ ದಬ್ಬಿದ್ದಾಗಿದೆ. ವರುಷಗಳಿಂದ ನನ್ನೊಳಗೆ ಗೂಡು ಕಟ್ಟಿ ಹಾಡದೆ ಕುಳಿತ ಕೋಗಿಲೆಯು ಇಂದು ಪಂಚಮದಲ್ಲಿ ಹಾಡಲಾರಂಭಿಸಿದೆ. ಮೊನ್ನೆ ಮೊನ್ನೆ **TGIF** ನಲ್ಲಿ ಸಿಕ್ಕಿದ್ದೆಯಲ್ಲಾ ಅದೆಂತಹ ವೈಬ್ರೇಶನ್....! ನಿನ್ನ ಬಳಿ ಇಂದೇ ನಿವೇದಿಸಿಕೊಳ್ಳಬೇಕೆನ್ನುವ ಹಂಬಲಕ್ಕೆ ಕಿಚ್ಚು ಹಚ್ಚಿದ್ದು ಅದೇ ಮೋಹಕ ನೋಟ, ಮತ್ತು ಆ ತುಂಟ ನಗೆ ಅಷ್ಟಕ್ಕೇ ಕರಗಿ ನೀರಾದಳು ಈ ನೀರೆ ಎಂದರೆ ನೀನು ನಂಬುತ್ತೀಯಾ...? ನನ್ನೊಳಗು ನಿನ್ನೊಳಗನ್ನು ಹೊಕ್ಕು ಅಲ್ಲಿ ಹೆಕ್ಕಿ ತೆಗೆಯಲ್ಪಟ್ಟ ಅಷ್ಟೂ ಮುತ್ತುಗಳನ್ನು, ನೀನು ಸದಾ ಹೇಳುತ್ತಿರುತ್ತಿಯಲ್ಲಾ 'ಲೈಫ್ ಈಸ್ ಬ್ಯೂಟಿಫುಲ್' ಎಂಬ ಅಕ್ಷರ ಸಾಲಿಗೆ ಪೋಣಿಸಿ ಶ್ರುತಿ ಮೀಟುವ ಹಂಬಲ, ಬಯಕೆ. ತಂತಿ ಕಡಿದರೂ ಪರವಾಗಿಲ್ಲ ಎಂಬ ನಿಲುವಿಗೆ ಬಂದಾಕೆ. ಇದು ಯಾಕೆ ಹೀಗೆ ಎಂದು ಮೀಟುವ ಬೆರಳಿಗೂ, ಶ್ರುತಿ ಹಿಡಿಯುವ ಕಂಠಕ್ಕೂ ಗೊತ್ತಿಲ್ಲ ಕಣೋ. ಇದು ಹರಿವ ತೊರೆಯ ಕಾವ್ಯವೇನು...!? ನೀನು ನನ್ನ ಶಬ್ದಗಳಿಗೆ ಕೇಳುವ ಕಿವಿಯಾಗು ಅಷ್ಟೇ ಸಾಕು ಈ ಜನ್ಮ ಪಾವನವಾಗಲು. ದೇಹ ಮಿಡಿಯುವ ಭಾವನೆಯನ್ನು ಕಟ್ಟಿ ಕೂರಿಸಬಹುದು. ಅಂದ ಮಾತ್ರಕ್ಕೆ ನನ್ನ ಮನಸ್ಸಿಗೆ ಬೇಲಿ ಹಾಕುವ ಧೈರ್ಯ, ಸಾಮರ್ಥ್ಯ ಯಾರಿಗೂ ಇಲ್ಲ. ಅದೇನಿದ್ದರೂ ನನ್ನದೇ ಸೃಷ್ಟಿ, ಲಯ. ಇದು ಈ ಇರುಳಿನ ಹರಿವ ತೊರೆಯ ಜಾಡು ಎಂದು ತಿಳಿದುಕೊ. ಎಲ್ಲವನ್ನೂ ನಿನ್ನ ಬಳಿ ನಿವೇದಿಸಿಕೊಂಡು ಇದೀಗ ಬಹಳಷ್ಟು ಹಗುರವಾಗಿದ್ದೇನೆ, ಮನಸ್ಸು ಹಾಯಾಗಿದೆ, ತನುವು ಹೂವಾಗಿದೆ, ಆನಂದವಾಗಿದೆ. ನೀನೆಂಬ ನೀನೇ ಬದುಕಿಗೊಂದು ಚೇತೋಹಾರಿ... ದಿಸ್ ಈಸ್ ಮೈ ಕನ್ಫೆಶನ್ ಕಣೋ....ಎಂದವಳೇ ಮೊಬೈಲ್ ಅನ್ನು ಕಡಿದಳು.

ಹರಿವ ತೊರೆಯ ನಡುವೆ ಬರಿದಾದ ಪಂಚಮನ ಗ್ಲಾಸಿಗೆ ತೇಜಸ್ವಿ ಶಿವಾಸ್ ಅನ್ನು ಸುರಿದ. ದೂರದಲ್ಲೆಲ್ಲೋ ಗಣೇಶನನ್ನು ಇರಿಸಿದ ಪೆಂಡಾಲಿನಿಂದ ಅಣ್ಣಾವ್ರು ಹಾಡಿದ 'ಶ್ರುತಿ ಸೇರಿದೆ....ಹಿತವಾಗಿದೆ...ಬಾಳೆಲ್ಲ ಇಂಪಾಗಿದೆ...' ಹಾಡು ತಿಳಿ ತಿಳಿಯಾಗಿ ಕೇಳಿ ಬರುತ್ತಿತ್ತು. ಪಂಚಮ ಎದ್ದವನೇ, ತೇಜಸ್ವಿ,'ಲೈಫ್ ಈಸ್ ಬ್ಯೂಟಿಫುಲ್...ಅಗ್ಯೆನ್ ಅಂಡ್ ಅಗ್ಯೆನ್...ಇಟ್ ಮೂವ್ಸ್ ಆನ್' ಎಂದವನೇ ಶಿವಾಸ್ ಭರಿತ ಗ್ಲಾಸ್ ಸಮೇತ ಹರಿವ ತೊರೆಯ ಬಳಿಗೆ ನಡೆದ.